ಸದನವು ಮಧ್ಯಾಹ್ನ 4–19 ಘಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೆ. ಜಿ. ಬೋಪಯ್ಯ ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

4. ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಎಂ. ಪಿ. ಎಂ. ಕಾರ್ಖಾನೆಯ ಖಾಸಗೀಕರಣ ಬಗ್ಗೆ

1 (138) ಶ್ರೀ ಸಂಗಮೇಶ್ವರ ಬಿ. ಕೆ. (ಭದ್ರಾವತಿ):– ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆಯನ್ನು ಖಾಸಗೀಕರಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮದ ಮಾಹಿತಿಯನ್ನು ನೀಡುವುದು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ) ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಎನ್. ಎ. ಹ್ಯಾರಿಸ್ (ಶಾಂತಿನಗರ) (ಶ್ರೀ ಬಿ. ಕೆ. ಸಂಗಮೇಶ್ವರವರ ಪರವಾಗಿ):– ನಾನು ಕೇಳಿದ ಪ್ರಶ್ನೆಗೆ privatization ಮಾಡುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನನ್ನ appeal ಏನೆಂದರೆ, ನಾನು Mysore Paper Mills ನ ಅಧ್ಯಕ್ಷನಾಗಿದ್ದೆ. ಸರ್ಕಾರ ಬೇಕಾದಷ್ಟು foreign investment, Global Investors' Meet ಮಾಡಿ ದೊಡ್ಡ ದೊಡ್ಡ industry ಗಳನ್ನು ತರುವಂಥ ಪ್ರಯತ್ನ ನಡೆಯುತ್ತಿದೆ. ಆದರೆ, ಇದು ನಮ್ಮಲ್ಲಿಯೇ ಇರುವಂಥ ಒಂದು ದೊಡ್ಡ industry ಆಗಿದೆ. ಇವತ್ತು ಈ ತರಹದ ಒಂದು industry ಮಾಡಬೇಕಾದರೆ ಸಾವಿರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಲ್ಲಿಗೆ ಇವತ್ತಿನ ಮಟ್ಟಕ್ಕೆ ಸುಮಾರು 500 ಕೋಟಿ ರೂಪಾಯಿಗಳಷ್ಟು ಸರ್ಕಾರ ಏನಾದರೂ invest ಮಾಡಿದರೆ ರಾಷ್ಟ್ರದಲ್ಲಿ ಅದನ್ನು ಒಂದು best paper industry ಮಾಡಲಿಕ್ಕೆ ಆಗುತ್ತದೆ. Sugar production plus power production ಕೂಡ ಇದೆ. ಇದನ್ನು full capacity ಯಲ್ಲಿ ಇಲ್ಲಿಯವರೆಗೂ ನಾವು utilize ಮಾಡಿಲ್ಲ. ದಯವಿಟ್ಟು ಸರ್ಕಾರ ಇದಕ್ಕೆ ಬೇಕಾದಂಥ ಹಣವನ್ನು ಒದಗಿಸಿ ಒಳ್ಳೆಯ ರೀತಿಯಲ್ಲಿ ಮಾಡಬೇಕು. ಆ industry ಯಲ್ಲಿ ಸುಮಾರು 5000 ಕ್ಕಿಂತ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಅವರ ಜೀವನಕ್ಕೆ ಒಳ್ಳೆಯ ದಾರಿ ಆಗುತ್ತದೆ. ಇದರಿಂದ ಸರ್ಕಾರಕ್ಕೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಶ್ರೀ ಮುರುಗೇಶ್ ಆರ್. ನಿರಾಣಿ: ಅಕ್ಟೋಬರ್ 22ನೇ ತಾರೀಖು ಮಾನ್ಯ

ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆದು ಅದರಲ್ಲಿ ಸಂಪೂರ್ಣವಾಗಿ, ವಿವರವಾಗಿ ಚರ್ಚೆ ಮಾಡಿದ ನಂತರ Financial Advisory Committee ಮತ್ತು good consultant ಅಂದರೆ ಯೋಜನೆಗೆ ಒಬ್ಬ ಸಲಹೆಗಾರರನ್ನು ನೇಮಿಸಿ ಮೂರು ತಿಂಗಳೊಳಗಾಗಿ ಯಾವ್ಯಾವ section ನಲ್ಲಿ ಯಾವ ರೀತಿ ಅದನ್ನು ಅಭಿವೃದ್ಧಿಪಡಿಸಬಹುದು ಮತ್ತು ಹೊಸ ಯಂತ್ರೋಪಕರಣಗಳನ್ನು ತರಬಹುದು ಎನ್ನುವಂಥ ಮಾಹಿತಿಯನ್ನು ಆ ಸಭೆಗೆ ಕೊಡಲಿಕ್ಕೆ ಈಗಾಗಲೇ ಸೂಚನೆ ನೀಡಲಾಗಿದೆ. ಅದರ ಜೊತೆಗೆ, ಅಲ್ಲಿ ಕಾರ್ಖಾನೆಗಳು ಸುಸಜ್ಜಿತವಾಗಿ ನಡೆಯಲಿಕ್ಕೆ 50 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಮಾಡಿರುವ ವಿನಂತಿಯನ್ನು ಮಾನ್ಯ ಮುಖ್ಯಮಂತ್ರಿಯವರು Finance Department ಗೆ ಈಗಾಗಲೇ ಕಳುಹಿಸಿಕೊಟ್ಟಿದ್ದಾರೆ. ತಾವು ಹೇಳಿರುವ ಸಲಹೆಗಳನ್ನು ಬರುವ ದಿನಗಳಲ್ಲಿ ಗಮನದಲ್ಲಿಟ್ಟುಕೊಂಡು ಸಲಹೆಗಾರರ ವರದಿ ಬಂಧ ನಂತರ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ.

ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಕಾಮಗಾರಿಗಳು

2 (54) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):– ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೆತ್ತಿಕೊಂಡ ಸಣ್ಣ ನೀರಾವರಿ ಕಾಮಗಾರಿಗಳು ಯಾವುವು; ಅವುಗಳ ವೆಚ್ಚ ಎಷ್ಟು ಹಾಗೂ ಅವುಗಳು ಯಾವ ಹಂತದಲ್ಲಿವೆ?

ಆ) ಅವುಗಳಲ್ಲಿ ಪೂರ್ಣಗೊಂಡಿರುವ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು;

ಇ) ಕಾಮಗಾರಿಗಳು ಅಪೂರ್ಣಗೊಳ್ಳಲು ಕಾರಣಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಸಣ್ಣ ನೀರಾವರಿ ಇಲಾಖೆಯಿಂದ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 28 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಇವುಗಳ ವೆಚ್ಚ ಹಾಗೂ ಪ್ರಸ್ತುತ ಹಂತದ ವಿವರಗಳನ್ನು ಅನುಬಂಧ (1) ರಲ್ಲಿ ನೀಡಲಾಗಿದೆ.

ಆ) ಒಟ್ಟು ಕೈಗೊಳ್ಳಲಾದ 28 ಕಾಮಗಾರಿಗಳಲ್ಲಿ 17 ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ 11 ಕಾಮಗಾರಿಗಳು ವಿವಿಧ ಹಂತದಲ್ಲಿವೆ. ವಿವರಗಳನ್ನು ಅನುಬಂದ–1ರಲ್ಲಿ ನೀಡಲಾಗಿದೆ.

ಇ) ಬಾಕಿ 11 ಕಾಮಗಾರಿಗಳು ವಿವಿದ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಯಾವುದೇ ಕಾಮಗಾರಿಗಳು ಅಪೂರ್ಣಗೊಂಡಿರುವುದಿಲ್ಲ.